## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.

### ಸಿಸಿ ನಂಬರ್ **65/2021**

ಫಿರ್ಯಾದಿ ಸರಕಾರ **(**ಹಾವೇರಿ ಮಹಿಳಾಪೊಲೀಸ ಠಾಣೆ**).**

ವಿರುದ್ದ

ಆರೋಪಿತರು: ಪ್ರಕಾಶ ತಂದೆ ಚನ್ನವೀರಸ್ವಾಮಿ ಕೋಟಿಮಠ
ವಯಾಃ **35** ವರ್ಷ**,** ಉದ್ಯೋಗಃ ಸ್ವಂತ ಕೆಲಸ
ಸಾಃ ಲಕ್ಮೇಶ್ವರ**,** ತಾಃಜಿಃ ಗದಗ

**:ದೋಷಾರೋಪಣೆ:**

ಇದರಲ್ಲಿ ಶ್ರೀ ಪ್ರಕಾಶ.ಎ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತನಾದ ನಿನ್ನ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ದಿನಾಂಕಃ 05.04.2021 ರಂದು ರಾತ್ರಿ 8-00 ಗಂಟೆ ಸುಮಾರಿಗೆ ಹಾವೇರಿಯ ಶಹರದ ಗೂಗಿಕಟ್ಟಿ ಓಣಿಯಲ್ಲಿ ಪ್ರತಿಭಾ ಮುಳಗುಂದ ಇವರ ಮನೆಗೆ ಆರೋಪಿತನಾದ ನೀನು ಉದ್ದೇಶಪೂರ್ವಕವಾಗಿ ಬಂದು ಚಾ.ಸಾ-4 ನೇದವರು ಅಂದರೆ ನಿನ್ನ ಹೆಂಡತಿಗೆ ಹಲ್ಲೆ ಮಾಡುತ್ತಿದ್ದಾಗ 1 ವರ್ಷದ ಮಗು ಬೀಳುತ್ತದೆ ಎಂದು ಚಾ.ಸಾ-1 ರವರು ಮಗುವನ್ನು ಹಿಡಿದುಕೊಳ್ಳಲು ಹೋದಾಗ ಆರೋಪಿತನಾದ ನೀನು ಚಾ.ಸಾ-1 ರವರ ಮನೆಯ ಮುಂದೆ ರಸ್ತೆಯ ಮೇಲೆ ಚಾ.ಸಾ-1 ರವರ ಸೀರೆಯನ್ನು ಹಿಡಿದು ಎಳೆದಾಡಿ ಆಕೆಯ ಮಾನಕ್ಕೆ ಕುಂದುಂಟಾಗುವ ರೀತಿಯಲ್ಲಿ ನಡೆದುಕೊಂಡಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ.354 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತನಾದ ನೀನು ಉದ್ದೇಶಪೂರ್ವಕವಾಗಿ ಚಾ.ಸಾ-4 ನೇದವರಿಗೆ ಕೈಗಳಿಂದ ಹಲ್ಲೆ ಮಾಡಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ. 323 ರ ಅಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತನಾದ ನೀನು ಉದ್ದೇಶಪೂರ್ವಕವಾಗಿ ಚಾ.ಸಾ-4 ನೇದವರಿಗೆ ಬೋಸಡಿ, ಹಾದರಗಿತ್ತಿ, ಮಿಂಡ್ರಿ ಅಂತಾ ಅವಾಚ್ಯವಾಗಿ ಬೈಯುತ್ತಿದ್ದಾಗ ಚಾ.ಸಾ-1 ರವರು ಯಾಕೆ ಬೈಯುತ್ತಿಯಾ ಅಂತಾ ಕೇಳಿದ್ದಕ್ಕೆ ಏನಲೇ ಹಾದರಗಿತ್ತಿ, ಬೋಸುಡಿ ನನಗ ಬುದ್ದಿ ಹೇಳಾಕ ಬರ್ತೀಯಾ ಅಂತಾ ಅವಾಚ್ಯವಾಗಿ ಬೈದಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ. 504 ರ ಅಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತನಾದ ನೀನು ಉದ್ದೇಶಪೂರ್ವಕವಾಗಿ ಚಾ.ಸಾ-1 ಮತ್ತು 4 ರವರಿಗೆ ನಿಮ್ಮನ್ನು ಜೀವ ಸಹಿತ ಬಿಡುವದಿಲ್ಲಾ ಅಂತಾ ಪ್ರಾಣ ಬೆದರಿಕೆ ಹಾಕಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ. 506 ರ ಅಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೇಲೆ ಹೇಳಿದ ದೋಷಾರೋಪಣೆ ಮೇಲೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿಃ 27-02-2023.

(ಪ್ರಕಾಶ.ವಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.

ಸಿಸಿ ನಂಬರ್ **65/2021**

ದಿನಾಂಕಃ **27.02.2023.**

ಫಿರ್ಯಾದಿ        **ಸರಕಾರ (ಹಾವೇರಿ ಮಹಿಳಾಪೊಲೀಸ ಠಾಣೆ).**

ವಿರುದ್ದ

ಆರೋಪಿತರುಃ    ಪ್ರಕಾಶ ತಂದೆ ಚನ್ನವೀರಸ್ವಾಮಿ ಕೋಟಿಮಠ
ವಯಾಃ **35** ವರ್ಷ**,** ಉದ್ಯೊಗಃ ಸ್ವಂತ ಕೆಲಸ
ಸಾಃ ಲಕ್ಮೇಶ್ವರ**,** ತಾಃಜಿಃ ಗದಗ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

**ಉತ್ತರಃ**

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

**ಉತ್ತರಃ**

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**

ಆರೋಪಿಯ ಸಹಿ: